ಜನವರಿ ತಿಂಗಳನ್ನು 'ರಾಷ್ಟ್ರೀಯ ಜನನ ದೋಷ ತಡೆಗಟ್ಟುವ ಮಾಸ'ವನ್ನಾಗಿ ಆಚರಿಸಲಾಗುತ್ತದೆ. ಈ ರಾಷ್ಟ್ರವ್ಯಾಪಿ ಜಾಗೃತಿ ಅಭಿಯಾನದ ಭಾಗವಾಗಿ – ಜನನ ದೋಷವೆಂದರೇನು, ಅದರ ಕಾರಣಗಳು, ತಡೆಗಟ್ಟುವ ಮಾರ್ಗಗಳು, ಲಭ್ಯವಿರುವ ಚಿಕಿತ್ಸೆಗಳ ಕುರಿತು 'ಗುಣಶೀಲ ಫರ್ಟಿಲಿಟಿ ಸೆಂಟರ್'ನ ಪ್ರನಾಳ ಶಿಶು ತಜ್ಞೆ ಡಾ. ದೇವಿಕಾ ಗುಣಶೀಲ ಮಾತನಾಡಿದ್ದಾರೆ.

◆ **ಹುಟ್ಟಿದ ನಂತರ ಮಗುವಿನಲ್ಲಿ ದೋಷ ಪತ್ತೆಯಾದಾಗ ಲಭ್ಯವಿರುವ ಚಿಕಿತ್ಸೆಗಳೇನು? ಸಂಪೂರ್ಣ ಗುಣಮುಖವಾಗಲು ಸಾಧ್ಯವೆ?**

ಎಲ್ಲಾ ನ್ಯೂನತೆಗಳನ್ನು ಸರಿಪಡಿಸಲಾಗದು. ಕೆಲವು ಜೀವನಪರ್ಯಂತ ಜೊತೆಗಿರುತ್ತವೆ. ಸದ್ಯಕ್ಕಂತೂ ಚಿಕಿತ್ಸೆಯ ಆಯ್ಕೆಗಳು ಸೀಮಿತವಾಗಿವೆ. ಔಷಧಿಗಳು, ಚಿಕಿತ್ಸೆಗಳು, ಶಸ್ತ್ರಚಿಕಿತ್ಸೆಗಳು ಮತ್ತು ಸಹಾಯಕ ಸಾಧನಗಳಿಂದ ಈ ಸ್ಥಿತಿಯನ್ನು ನಿಯಂತ್ರಿಸುತ್ತ ಹೋಗಬೇಕು. ಸಂಪೂರ್ಣ ಗುಣಮುಖವಾಗುವ ಸಾಧ್ಯತೆ ಬಹಳ ಕಡಿಮೆ. ಅಸಹಜ ಹೃದಯ ಬಡಿತ, ಭ್ರೂಣದ ಥೈರಾಯ್ಡ್ ಅಪಸಾಮಾನ್ಯ ಕ್ರಿಯೆಯಂತಹ ಪರಿಸ್ಥಿತಿಗಳನ್ನು ಔಷಧಿಗಳ ಮೂಲಕ ಹತೋಟಿಯಲ್ಲಿಡಬಹುದು. ಒಂದೇ ಜರಾಯು (ಪ್ಲಾಸೆಂಟಾ) ಹಂಚಿಕೊಂಡು ಹುಟ್ಟುವ ಅವಳಿಗಳ ನಿರ್ವಹಣೆಯಲ್ಲಿ ಫೆಟೋಸ್ಕೋಪಿ ಮತ್ತು ಲೇಸರ್‌ನಂತಹ ಶಸ್ತ್ರಚಿಕಿತ್ಸೆ ಉಪಯುಕ್ತ.

◆ **ಜನನ ದೋಷಗಳು ಯಾವ ಹಂತದಲ್ಲಿ ಅಭಿವೃದ್ಧಿಯಾಗುತ್ತವೆ?**

ಗರ್ಭಧಾರಣೆಯ ಯಾವುದೇ ಹಂತದಲ್ಲಿಯೂ ಆಗಬಹುದು. ಆದರೆ ಮಗುವಿನ ಅಂಗರಚನೆಯ ನಂತರವಷ್ಟೇ, ಅಂದರೆ ಗರ್ಭಧಾರಣೆಯ ಮೊದಲ ಮೂರು ತಿಂಗಳ ನಂತರ ಅವುಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಇನ್ನೂ ಕೆಲವು ದೋಷಗಳು ಗರ್ಭಧಾರಣೆಯ ಕೊನೆಯ ಹಂತದಲ್ಲಿ ಕಂಡುಬರುತ್ತವೆ. ಸೀಳುತುಟಿಯಂತಹ ಕೆಲವು ದೋಷಗಳನ್ನು ಬೇಗ ಗುರುತಿಸಬಹುದು. ಆದರೆ ಹೃದಯದ ತೊಂದರೆ ಅಥವಾ ಶ್ರವಣ ದೋಷಗಳು ಮೇಲ್ನೋಟಕ್ಕೆ ಕಂಡು ಬರುವುದಿಲ್ಲವಾದ್ದರಿಂದ ಮಗು ಹುಟ್ಟಿದ ಮೇಲೆ, ನಿರ್ದಿಷ್ಟ ಪರೀಕ್ಷೆಗಳ ಮೂಲಕವೇ ಗುರುತಿಸಲು ಸಾಧ್ಯ. ಈ ಸ್ಥಿತಿಗೆ ಮೂಲ ಕಾರಣಗಳೆಂದರೆ ಧೂಮಪಾನ, ಮದ್ಯಪಾನ ಅಥವಾ ಮಾದಕ ವಸ್ತುಗಳ ಸೇವನೆ (ತಾಯಿ), ಅನಿಯಂತ್ರಿತ ಮಧುಮೇಹ, ಸ್ಥೂಲಕಾಯದಂಥ ಸಮಸ್ಯೆಗಳು, ಕೆಲವು ಔಷಧಿಗಳ ಸೇವನೆ (ಉದಾಹರಣೆಗೆ: ಐಸೊಟ್ರೆಟಿನಾಯಿನ್) ಜನನ ದೋಷದ ಕುಟುಂಬ ಇತಿಹಾಸ, ಲೈಂಗಿಕವಾಗಿ ಹರಡುವ ಸೋಂಕುಗಳು, ವೈರಲ್ ಅಥವಾ ಬ್ಯಾಕ್ಟೀರಿಯಾ ಸೋಂಕುಗಳು, 35 ವರ್ಷದ ನಂತರ ಗರ್ಭಧರಿಸುವುದು.

◆ **ಜನನ ದೋಷಗಳನ್ನು ತಡೆಯಲು ಸಾಧ್ಯವಿದೆಯೇ?**

ಶಿಸ್ತುಬದ್ಧವಾದ ಗರ್ಭಧಾರಣೆಯ ಯೋಜನೆಯಿಂದ ಜನನ ದೋಷಗಳನ್ನು ತಡೆಯಲು ಖಂಡಿತ ಸಾಧ್ಯವಿದೆ. ಅಂತಹ ಅಂಶಗಳೆಂದರೆ:

ಗರ್ಭ ಧರಿಸಲು ಯೋಜಿಸಿದ ಕೂಡಲೇ ವೈದ್ಯರನ್ನು ಭೇಟಿ ಮಾಡಿ. ಗರ್ಭಧಾರಣೆಯ ಮೊದಲು ಇರುವ ವೈದ್ಯಕೀಯ ಪರಿಸ್ಥಿತಿಗಳ ಬಗ್ಗೆ ಚರ್ಚಿಸಿ, ಗರ್ಭಧರಿಸುವ ಮುನ್ನ ಮತ್ತು ನಂತರ ಫೋಲಿಕ್ ಆ್ಯಸಿಡ್ ಮಾತ್ರೆಗಳನ್ನು ಮತ್ತು ಮಲ್ಟಿವಿಟಮಿನ್ ಮಾತ್ರೆಗಳನ್ನು ತೆಗೆದುಕೊಳ್ಳಿ, ಮದ್ಯಪಾನ–ಧೂಮಪಾನ ನಿಲ್ಲಿಸಿ, ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳಿ, ಮಧುಮೇಹ ಅಥವಾ ಇನ್ನಾವುದೇ ಆರೋಗ್ಯ ಸಮಸ್ಯೆಗಳು ನಿಯಂತ್ರಣದಲ್ಲಿರಲಿ, ಯಾವುದೇ ಔಷಧಿಗಳನ್ನು ತೆಗೆದುಕೊಳ್ಳುವ ಮುನ್ನ ನಿಮ್ಮ ವೈದ್ಯರನ್ನು ಸಂಪರ್ಕಿಸಿ

◆ **ಗರ್ಭಾಶಯದಲ್ಲಿ ಭ್ರೂಣಕ್ಕೆ ನೀಡಬಹುದಾದ ಥೆರಪಿ ಯಾವುವು?**

ಜನ್ಮಜಾತ ಡಯಾಫ್ರಾಗ್ಮ್ಯಾಟಿಕ್ ಅಂಡವಾಯು: ಡಯಾಫ್ರಾಮ್ (ಪೊರೆ) ನಲ್ಲಿನ ರಂಧ್ರವು ಕಿಬ್ಬೊಟ್ಟೆಯ ಅಂಶವೆಲ್ಲವೂ ಎದೆಗೆ ಪ್ರವೇಶಿಸಲು ಮತ್ತು ಆ ಮೂಲಕ ಶ್ವಾಸಕೋಶದ ಬೆಳವಣಿಗೆಯನ್ನು ನಿರ್ಬಂಧಿಸಲು ಕಾರಣವಾಗುತ್ತದೆ. ಶಸ್ತ್ರಚಿಕಿತ್ಸೆಯ ಮೂಲಕ ಶ್ವಾಸಕೋಶದ ಕಾರ್ಯವನ್ನು ಸುಧಾರಿಸಬಹುದು. ಇದರಿಂದ ಮಗು ಬದುಕುಳಿಯುವ ಪ್ರಮಾಣವೂ ಹೆಚ್ಚು.

ಮೂತ್ರದ ಅಡಚಣೆ: ಮೂತ್ರವು ಶಿಶುವಿನ ದೇಹದಿಂದ ಹೊರಹೋಗದಂತೆ ನಿರ್ಬಂಧಿಸಿದಾಗ ಮೂತ್ರಪಿಂಡದ ಶಾಶ್ವತ ಹಾನಿಗೆ ಕಾರಣವಾಗುತ್ತದೆ. ಜನನಕ್ಕೂ ಮೊದಲೇ ಈ ಅಡಚಣೆಯನ್ನು ನಿವಾರಿಸಬಹುದು. ಇದರಿಂದ ಮೂತ್ರಪಿಂಡವನ್ನು ರಕ್ಷಿಸಲು ಸಾಧ್ಯವಾಗುತ್ತದೆ.

◆ **ಪ್ರಿಇಂಪ್ಲಾಂಟೇಷನ್ ಜೆನೆಟಿಕ್ ಸ್ಕ್ರೀನಿಂಗ್ (ಪಿಜಿಎಸ್) ಯಾವಾಗ ಸೂಕ್ತ?**

ಇದನ್ನು ಕೃತಕ ಗರ್ಭಧಾರಣೆಯಲ್ಲಿ (ಐವಿಎಫ್) ನಡೆಸಲಾಗುತ್ತದೆ. ಭ್ರೂಣವನ್ನು ಗರ್ಭಕೋಶಕ್ಕೆ ಸೇರಿಸುವ ಮುನ್ನವೇ ವಂಶವಾಹಿ ಸಂಬಂಧಿ ಪರೀಕ್ಷೆ ಮಾಡಿ, ಭ್ರೂಣದ ಗುಣಮಟ್ಟವನ್ನು ನಿರ್ಧರಿಸಲಾಗುತ್ತದೆ. ಇದರಿಂದ ಅಸಹಜ ಭ್ರೂಣ ಗರ್ಭಕೋಶ ಸೇರುವುದನ್ನು, ನಿರ್ದಿಷ್ಟ ಆನುವಂಶಿಯ ಕಾಯಿಲೆಗಳು ಭ್ರೂಣಕ್ಕೆ ವರ್ಗವಾಗುವುದನ್ನು ತಪ್ಪಿಸಬಹುದು. ಗರ್ಭಪಾತದ ಇತಿಹಾಸ, ಮಾನಸಿಕ ಹಾಗೂ ದೈಹಿಕ ಸಮಸ್ಯೆಗೆ ಕಾರಣವಾಗುವ ಕ್ರೋಮೋಸೋಮಿನ ಸಮಸ್ಯೆ, ಮಧುಮೇಹ ಇರುವವರು, ಮುಖ್ಯವಾಗಿ 35 ವರ್ಷ ಮೇಲ್ಪಟ್ಟ ಮಹಿಳೆಯರು ಈ ಪ್ರಕ್ರಿಯೆಗೆ ಒಳಗಾಗುವುದು ಸೂಕ್ತ.

◆ **ವರ್ಣತಂತುಗಳ (ಕ್ರೋಮೋಸೋಮ್) ಏರುಪೇರಿನಿಂದ ಎದುರಾಗುವ ಅಪಾಯಗಳೇನು?**

35 ವರ್ಷ ಅಥವಾ ಅದಕ್ಕಿಂತ ಹೆಚ್ಚು ವಯಸ್ಸಿನ ಮಹಿಳೆಯರಿಗೆ ಹುಟ್ಟುವ ಮಗು ವರ್ಣತಂತು ಸಮಸ್ಯೆಗಳನ್ನು ಹೊಂದುವ ಅಪಾಯ ಹೆಚ್ಚಿರುತ್ತದೆ. ವರ್ಣತಂತುಗಳ ಏರುಪೇರಿನಿಂದ ಡೌನ್ ಸಿಂಡ್ರೋಮ್ ಅಪಾಯವೂ ಹೆಚ್ಚು.

◆ **ಗರ್ಭಾವಸ್ಥೆಯ ಮೊದಲು ಮತ್ತು ನಂತರ ಮಲ್ಟಿವಿಟಮಿನ್ ತೆಗೆದುಕೊಳ್ಳುವುದರಿಂದ ಏನು ಪ್ರಯೋಜನ?**

ಈ ವಿಟಮಿನ್ ಪೂರಕಗಳಲ್ಲಿ ವಿಟಮಿನ್ ಎ, ಸಿ, ಮತ್ತು ಡಿ, ಕಬ್ಬಿಣದಂತಹ ಫೋಲಿಕ್ ಆಸಿಡ್ ಖನಿಜಗಳು ಸೇರಿರುತ್ತವೆ. ಇವು ಗರ್ಭಾವಸ್ಥೆಯಲ್ಲಿ ಅಗತ್ಯವಿರುವ ಜೀವಸತ್ವಗಳು ಮತ್ತು ಖನಿಜಗಳನ್ನು ಪೂರೈಸುತ್ತವೆ.

◆ **ಮಗುವಿನ ಜನನ ದೋಷಗಳಲ್ಲಿ ತಂದೆಯ ಪಾತ್ರ ಇದೆಯೇ?**

ತಂದೆಯ ವಯಸ್ಸಿಗೂ (40ಕ್ಕಿಂತ ಹೆಚ್ಚು) ಹುಟ್ಟುವ ಮಗುವಿನ ಆಟಿಸಂ ಮತ್ತು ಸ್ಕಿಜೋಫ್ರೇನಿಯಾದಂತಹ ಆರೋಗ್ಯ ಸಮಸ್ಯೆಗೂ ಸಂಬಂಧವಿದೆ ಎನ್ನುತ್ತವೆ ಕೆಲವು ಅಧ್ಯಯನಗಳು. ಹೃದಯ ಕಾಯಿಲೆ, ಡೌನ್ ಸಿಂಡ್ರೋಮ್‌ನಂತಹ ತೊಡಕುಗಳಿಗೂ ತಂದೆಯ ವಯಸ್ಸು ಕಾರಣ ಎನ್ನುವ ವಾದವೂ ಇದೆ. ಆದರೆ ಇದ್ಯಾವುದೂ ದೃಢಪಟ್ಟಿಲ್ಲ.

◆ **ಜನನ ದೋಷಗಳನ್ನು ತಡೆಯುವಲ್ಲಿ ಜೆನೆಟಿಕ್ ಸ್ಕ್ರೀನಿಂಗ್ ಮತ್ತು ಜೆನೆಟಿಕ್ ಟೆಸ್ಟ್‌ನ ಪಾತ್ರವೇನು?**

ಜನನ ದೋಷಗಳನ್ನು ತಡೆಯಬಹುದಾದ ಪ್ರಮುಖ ತಪಾಸಣೆಗಳಲ್ಲಿ ಜೆನೆಟಿಕ್ ಸ್ಕ್ರೀನಿಂಗ್ ಮತ್ತು ಜೆನೆಟಿಕ್ ಟೆಸ್ಟ್ ಮುಖ್ಯವಾದವು. ವಯಸ್ಸಿಗೆ ಸಂಬಂಧಿಸಿದ ಅಸ್ವಸ್ಥತೆಗಳು ಅಥವಾ ಕೌಟುಂಬಿಕ ಇತಿಹಾಸ/ಆನುವಂಶಿಕ ಅಸ್ವಸ್ಥತೆಗಳು ಮತ್ತು ಜನನ ದೋಷಗಳ ಅಪಾಯವನ್ನು ಹೊಂದಿರುವ ದಂಪತಿಗಳಿಗೆ ಜೆನೆಟಿಕ್ ಸ್ಕ್ರೀನಿಂಗ್ (ಆನುವಂಶಿಕ ತಪಾಸಣೆ) ಸಹಾಯ ಮಾಡುತ್ತದೆ. ಆದರೆ ಪರಿಸರ ಮತ್ತು ವಿಷಕಾರಿ ವಾತಾವರಣಕ್ಕೆ ಸಂಬಂಧಿಸಿದ ಮತ್ತು ವಿವರಿಸಲಾಗದ ಕಾರಣಗಳಿಂದ ಬರುವ ದೋಷಗಳನ್ನು ತಿಳಿಯಲು ಇದರಿಂದ ಸಾಧ್ಯವಾಗುವುದಿಲ್ಲ. ■